# ಹಂಚಿ ತಿಂದರೆ ಹೆಚ್ಚು ರುಚಿ

■ ಮಾಲತಿ ಹೆಗಡೆ


ವಿಜಯಕುಮಾರಿ

ಸೀಮಾ, ರಮಾ ಅಕ್ಕ ತಂಗಿಯರು, ಸೀಮಾ ಆರನೆಯ ತರಗತಿಯಲ್ಲಿ ಓದುತ್ತಿದ್ದರೆ ರಮಾ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಳು, ರೂಪದಲ್ಲಿ ಚೆಲುವೆಯರು, ಕಲಿಕೆಯಲ್ಲಿ ಜಾಣೆಯರು. ಕೆಲಸವನ್ನೂ ಅಚ್ಚುಕಟ್ಟಾಗಿ ಮಾಡುತ್ತಿದ್ದರು, ಅವರ ಅಮ್ಮ ಗಂಗಾಳಿಗೆ ಮಕ್ಕಳೆಂದರೆ ಅಚ್ಚುಮೆಚ್ಚು, ಅವರು ಮನೆಯ ಸುತ್ತಲೂ ಇರುವ ಜಾಗದಲ್ಲಿ ಪುಟ್ಟದೊಂದು ಕೈತೋಟವನ್ನು ನಿರ್ಮಿಸಿದ್ದರು. ಬೇಲಿಗೆಂದು ನೆಟ್ಟ ಮೊಗ್ಗೆ ದಾಸವಾಳ ಹೂವಿನ ರಸ ಹೀರಲು ದಿನವೂ ಹಲವಾರು ಬಗೆಯ ಪಕ್ಷಿಗಳು ಬರುತ್ತಿದ್ದವು. ಅವುಗಳು ಹಾಕಿದ ಹಿಕ್ಕೆಯಿಂದ ಪೇರಲೆ ಗಿಡವೊಂದು ಹುಟ್ಟಿತ್ತು. ಗಂಗಾ ಅದರ ಬುಡಕ್ಕಷ್ಟು ಗೊಬ್ಬರ ಮತ್ತು ಮಣ್ಣನ್ನು ಹಾಕಿ ದಿನವೂ ನೀರು ಹಾಕಿದರು. ಎರಡೇ ವರ್ಷದಲ್ಲಿ ಹತ್ತು ಹನ್ನೆರಡು ಅಡಿ ಬೆಳೆದ ಗಿಡದ ತುಂಬಾ ಪೇರಲಕಾಯಿಗಳು.

ಅಮ್ಮಾ ಇದ್ಯಾವಾಗ ಹಣ್ಣಾಗುತ್ತವೆ. ಮೊದಲಿನ ಹಣ್ಣು ನನಗೆ. ನಾನು ದೊಡ್ಡವಳು. ಆದ್ದರಿಂದ ನನಗೆ ಮೊದಲು ಸಲ್ಲಬೇಕು ಎಂದು ಸೀಮಾ ಹೇಳುತ್ತಿದ್ದಳು. ಮೊದಲಿನ ಹಣ್ಣು ನನಗೆ. ಯಾಕೆಂದರೆ ಮನೆಯಲ್ಲಿ ಚಿಕ್ಕವಳೆಂದರೆ ನಾನೇ ಎಂದು ರಮಾ ಹೇಳುತ್ತಿದ್ದಳು. ದಿನವೂ ಒಮ್ಮೆ ಯಾವುದಾದರೂ ಕಾಯಿ ಹಣ್ಣಾಯಿತೇ ಎಂದು ಅಕ್ಕ ತಂಗಿಯರಿಬ್ಬರೂ ವೀಕ್ಷಣೆ ಮಾಡಿಯೇ ಶಾಲೆಯಿಂದ ಬಂದವರು ಮನೆಯೊಳಕ್ಕೆ ಬರುತ್ತಿದ್ದರು. ಒಂದು ದಿನ ಅಮ್ಮನ ಕಣ್ಣಿಗೆ ಒಂದೇ ಗೊಂಚಲಿನಲ್ಲಿದ್ದ ಮೂರು ಹಣ್ಣುಗಳು ಕಂಡವು. ಅವರು ಎರಡು ಹಣ್ಣುಗಳನ್ನು ಕೊಯ್ದು ಮೂರನೇ ಹಣ್ಣನ್ನು ಹಕ್ಕಿಗಳಿಗೆಂದು ಬಿಟ್ಟರು. ನಿಮ್ಮಿಬ್ಬರಲ್ಲಿ ಜಗಳ ಆಗಬಾರದೆಂದು ದೇವರು ಒಮ್ಮಲೇ ಎರಡು ಕಾಯಿಗಳನ್ನು ಹಣ್ಣಾಗಿಸಿದ್ದಾನೆ ನೋಡಿ ಎಂದು ಮಕ್ಕಳ ಮುಂದೆ ಹಿಡಿದರು. ಮಕ್ಕಳ ಮುಖ ಅರಳಿತು. ಆದರೆ ಹಣ್ಣೆಂದರೆ ಅಚ್ಚಿನಲ್ಲಿ ತಯಾರಿಸಿದ್ದಲ್ಲವಲ್ಲ. ಒಂದು ಹಣ್ಣು ಕೊಂಚ ಚಿಕ್ಕದು ಒಂದು ದೊಡ್ಡದು ಇತ್ತು. ದೊಡ್ಡ ಹಣ್ಣು ನನಗೆ ಎಂದು ಇಬ್ಬರೂ ಗಲಾಟೆ ಶುರು ಮಾಡಿದರು!

ತಕ್ಷಣ ಗಂಗಾ ಹಣ್ಣುಗಳೆರಡನ್ನು ತಾನೇ ಇಟ್ಟುಕೊಂಡು ಮಕ್ಕಳೇ ಹೊರಗೆ ಹೋಗಿ ಬರೋಣ ನಿಮ್ಮ ಜಗಳ ಇತ್ಯರ್ಥವಾದ ಮೇಲೆ ತಿನ್ನಬಹುದು ಎಂದಳು. ಪೇರಲೆ ಮರದ ಬಳಿ ಅವಿತು ಕುಳಿತುಕೊಳ್ಳಿ ಎಂದಳು ಅಲ್ಲಿ ನೋಡುತ್ತಿರಿ ಎಂದಳು. ಅಲ್ಲಿ ಕೊಯ್ಯದೇ ಬಿಟ್ಟ ಹಣ್ಣಿತ್ತು. ಅದನ್ನು ಯಾವುದೋ ಹಕ್ಕಿ ಕೊಂಚ ಕುಕ್ಕಿ ತಿಂದು ಹೋಗಿತ್ತು. ಅವರು ನೋಡುತ್ತಿದ್ದಂತೆ ಕೆಂಪು ಕೊಕ್ಕಿನ ಗಿಣಿ ಬಂದು ಚಕಚಕನೇ ಕುಕ್ಕಿ ಸ್ವಲ್ಪ ತಿಂದು ಹಾರಿಹೊಯಿತು, ಅಮ್ಮ ಹುಷ್ ಎಂದು ಬಾಯ ಮೇಲೆ ಬೆರಳಿಟ್ಟು ಮಕ್ಕಳನ್ನು ಸುಮ್ಮನಿರಿಸಿದಳು. ಅಷ್ಟರಲ್ಲಿ ಕೆಂಪು ಜುಟ್ಟಿನ ಬುಲ್ ಬುಲ್ ಹಕ್ಕಿ ಬಂತು. ಅದು ಇನ್ನಷ್ಟು ತಿಂದು ಹಾರಿ ಹೋಯಿತು. ಅಷ್ಟರಲ್ಲಿ ಬಂದ ಗುಬ್ಬಚ್ಚಿ ಆಗಾಗ ಚಿಕ್ ಚಿಂವ ಎಂದು ಕೂಗುತ್ತಾ ಇನ್ನೊಂದಿಷ್ಟು ತಿಂದಿತು. ನಂತರ ಬಂದ ಕಾಗೆ ಉಳಿದ ಹಣ್ಣನ್ನು ಕಚ್ಚಿಕೊಂಡು ನೆಲಕ್ಕಿಳಿದು ಕಾವ್ ಕಾವ್ ಎಂದು ತನ್ನಬಳಗವನ್ನೂ ಕರೆದು ಹಂಚಿಕೊಂಡು ತಾನೂ ತಿಂದು ಹಾರಿ ಹೋಯಿತು.

ಮಕ್ಕಳೇ ಒಂದೇ ಹಣ್ಣನ್ನು ಜಗಳವೇ ಇಲ್ಲದೇ ಒಂದು ತಾಸಿನೊಳಗೆ ಏಳೆಂಟು ಹಕ್ಕಿಗಳು ತಿಂದು ಹೋದವು ನೋಡಿದಿರಲ್ಲಾ. ನಿಮಗೆ ಇಡೀ ಹಣ್ಣನ್ನು ಕೊಟ್ಟರೂ ಗಾತ್ರದ ಬಗ್ಗೆ ಜಗಳ ಆಡುತ್ತೀರಿ ಸರಿಯೇ? ಎಂದರು. ತಪ್ಪು ಮಾಡಿದೆವು ಅಮ್ಮಾ ನೀನು ಹಣ್ಣನ್ನು ಚಿಕ್ಕದಾಗಿ ಹೆಚ್ಚಿಕೊಡು. ನೀನು ಮತ್ತು ಅಪ್ಪ ಒಂದೊಂದು ಚೂರು ತಿನ್ನಿ. ನಾವು ನಮ್ಮ ಸ್ನೇಹಿತೆಯರಿಗೂ ಹಂಚಿಕೊಂಡು ತಿನ್ನುತ್ತೇವೆ ಎಂದರು. ಹಂಚಿ ತಿಂದರೆ ಹೆಚ್ಚು ರುಚಿ ಎನ್ನುವ ಪಾಠವನ್ನು ಕಲಿತ ಮಕ್ಕಳ ಮುಖದಲ್ಲಿ ಸಂತೋಷವಿತ್ತು. ■

# ಚಿಕ್ಕ ಸಂಸಾರ



■ ಸೋಮಲಿಂಗ ಬೇಡರ ಆಳೂರ

ಅಪ್ಪ ಹೋಗ್ತಾನ ದುಡಿಯಾಕ
ಅಮ್ಮ ಇರ್ತಾಳ ಮನಿಯಾಗ
ನಾನು ಹೋಗ್ತಿನಿ ಸಾಲಿಗಿ
ತಂಗಿ ಇರ್ತಾಳ ಜೊತಿಗಿ

ಅಪ್ಪ ತರ್ತಾನ ಪಗಾರ
ಅಮ್ಮ ಮಾಡ್ತಾಳ ಬಜಾರ
ನಾನು ಮಾಡ್ತಿನಿ ಓದುಬರಹ
ತಂಗಿ ಇರ್ತಾಳ ಜೊತಿಗಿ

ಅಪ್ಪ ತರ್ತಾನ ತಿಂಡಿ
ಅಮ್ಮ ಮಾಡ್ತಾಳ ಅಡಿಗಿ
ನಾನು ಹಾಕ್ತಿನಿ ಹೊಟ್ಟಿಗಿ
ತಂಗಿ ಇರ್ತಾಳ ಜೊತಿಗಿ

ಅಪ್ಪ ಮಾಡ್ತಾನ ಕಾಳಜಿ
ಅಮ್ಮ ಕೊಡ್ತಾಳ ಪ್ರೀತಿ
ನಾನು ಕುಣಿತಿನಿ ಹಿಗ್ಗಿ
ತಂಗಿ ಇರ್ತಾಳ ಜೊತಿಗಿ

ಅಪ್ಪ ಮನಿಗೆ ಆಧಾರ
ಅಮ್ಮ ಅದರ ಜೀವಾಳ
ನಾನು ಆಗ್ತಿನಿ ಅವರಂಗ
ತಂಗಿ ಇರ್ತಾಳ ಜೊತಿಗಿ

ನಮ್ದು ಚಿಕ್ಕ ಸಂಸಾರ
ಅಪ್ಪ ಅಮ್ಮ ಬಂಗಾರ
ಅವರ ಸೇವೆ ಮಾಡ್ತಿನಿ
ತಂಗಿ ಇರ್ತಾಳ ಜೊತಿಗಿ. ■